4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿಸಿ ನಂ- 11797/2004 ಚಾ.ಸಾ.-45 ಅ.ಸಾ.-2

ಪ್ರ.ವ.ಬೊ. ದಿಃ 10.04.2018

ಸಾಕ್ಷಿದಾರನ ಹೆಸರು : ಮುನಿರಾಜಯ್ಯ

ತಂದೆಯ ಹೆಸರು : ಲೇಟ್ ರಂಗಪ್ಪ

ವಯಸ್ಸು : 56 ವರ್ಷ

ಕೆಲಸ : ಎಎಸ್ಐ, ಬಗಲಗುಂಟೆ ಪೊಲೀಸ್ ಠಾಣೆ

ವಾಸ : ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

2001 ರಿಂದ 2008 ರವರೆಗೆ ನಂದಿನಿಲೇಔಟ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯದಲ್ಲಿದ್ದೆ. ದಿಃ 01.08.2003 ರಲ್ಲಿ ಠಾಣೆಯಲ್ಲಿ ಕರ್ತವ್ಯದಲ್ಲಿರುವಾಗ್ಗೆ ಬೆಳಿಗ್ಗೆ 11.15 ರ ಸಮಯದಲ್ಲಿ ಚಾ.ಸಾ.1 ರವರು ನನ್ನ ಮತ್ತು ಚಾ.ಸಾ.42, ಸೀತಾರಾಮು, ಹನುಮೇಗೌಡ, ರಾಜಣ್ಣ, ಸತ್ಯನಾರಾಯಣಸ್ವಾಮಿ, ವೆಂಕಟರಮಣಪ್ಪ, ಶಂಕರಪ್ಪ ಭಾಸ್ಕರಮೂರ್ತಿ, ಮಂಜುನಾಥ್ ಅವರನ್ನು ಕರೆದುಕೊಂಡು ನಂದಿನಿಲೇಔಟ್‌ನ ಕೂಲಿನಗರ ಬ್ರಿಡ್ಜ್ ಹತ್ತಿರ ಕರೆದುಕೊಂಡು ಹೋದರು. ನಮ್ಮ ಜೊತೆ ಇಬ್ಬರು ಪಂಚರು ಸಹ ಇದ್ದರು. ಚಾ.ಸಾ.1 ರವರು ನಮಗೆ ತಿಳಿಸಿದ ವಿಚಾರವೆಂದರೆ ತುಮಕೂರು ಕಡೆಯಿಂದ ಬೆಂಗಳೂರು ಕಡೆಗೆ ಮೂರು ಲಾರಿಗಳು ಬರುತ್ತಿದ್ದು ಅವುಗಳಲ್ಲಿ ಪಡಿತರ ಚೀಟಿ ಮುಖಾಂತರ ನ್ಯಾಯಬೆಲೆ ಅಂಗಡಿಯಲ್ಲಿ ಫಲಾನುಭವಿಗಳಿಗೆ ವಿತರಿಸುವ ಗೋಧಿಯನ್ನು ಲಕ್ಷ್ಮೀವೆಂಕಟೇಶ್ವರ ಮಿಲ್‌ಗೆ ಅಕ್ರಮವಾಗಿ ಕೊಡಲು ಬರುತ್ತಿದ್ದಾರೆ ಎಂದು ತಿಳಿಸಿದರು. ಅದನ್ನು ತಡೆಯಬೇಕು ಎಂದು ತಿಳಿಸಿದರು. ನಂತರ ನಾವು ಅಲ್ಲಿ ಕಾಯುತ್ತಿರುವಾಗ 3 ಲಾರಿಗಳು ಸುಮಾರು 12.00 ಗಂಟೆ ಸಮಯದಲ್ಲಿ ಬಂದವು. ಅದರಲ್ಲಿ ಎರಡು 407 ಟೆಂಪೋ ಕೆಎ-06-9788, ಕೆಎ-04-4539 ಹಾಗೂ ಒಂದು ದೊಡ್ಡ ಲಾರಿ ಕೆಎ-04-ಬಿ-2524 ಇತ್ತು. ನಾನು ಮತ್ತು ಸಿಬ್ಬಂದಿಯವರು ಸೇರಿ ವಾಹನವನ್ನು ತಡೆದೆವು. ಅದರಲ್ಲಿ ಒಂದು ವಾಹನದ ಚಾಲಕ ಇಳಿದು ಓಡಿ ಹೋಗಿದ್ದ,

ಮತ್ತಿಬ್ಬರನ್ನು ಹಿಡಿದುಕೊಂಡೆವು. ವಾಹನದಲ್ಲಿದ್ದ ಚಾಲಕರನ್ನು ವಿಚಾರಿಸಲಾಗಿ ಮೆಕ್ಕೆಜೋಳ ಎಂದು ತಿಳಿಸಿರುತ್ತಾರೆ. ನಂತರ ನಾವು ವಾಹನದಲ್ಲಿದ್ದ ಮೂಟೆಗಳನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ಗೋಧಿ ಕಂಡುಬಂತು. ನಂತರ ಸ್ಥಳದಲ್ಲಿ ಪಂಚನಾಮೆ ಮಾಡಿ ವಾಹನ ಹಾಗೂ ಮಾಲುಗಳು ಮತ್ತು ಆಸಾಮಿವುಗಳನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಬಂದು, ಚಾ.ಸಾ.1 ರವರು ಆರೋಪಿತರ ವಿರುದ್ಧ ಕ್ರಮವನ್ನು ಜರುಗಿಸಿದ್ದಾರೆ. ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ. ಒಂದು ಲಾರಿಯಲ್ಲಿ 60 ಚೀಲ ಗೋಧಿ, ಇನ್ನೊಂದರಲ್ಲಿ 120 ಚೀಲ ಹಾಗೂ 320 ಚೀಲ ಗೋಧಿ ಇದ್ದವು. ಪ್ರತಿಯೊಂದು ಚೀಲ 50 ಕೆಜಿ ತೂಕದ್ದಾಗಿರುತ್ತದೆ. ಆ ದಿನ ಚಾ.ಸಾ.1 ರವರು ವಶಕ್ಕೆ ಪಡೆದ ಆರೋಪಿ ಒಂದು ಮತ್ತು ಎರಡುರವನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ.

ಪಾಟೀ ಸವಾಲುಃ ಶ್ರೀ ಎಸ್.ಎಂ.ಪಿ ವಕೀಲರಿಂದ 3ನೇ ಆರೋಪಿ ಪರ ಃ

ದಿಃ 01.08.2003 ರಲ್ಲಿ ನನಗೆ ಬೆಳಿಗ್ಗೆ 9.00 ರಿಂದ ರಾತ್ರಿಯವರೆಗೆ ಇರುತ್ತಿತ್ತು. ನಾನು ಕೇವಲ ಕಂಪ್ಯೂಟರ್ ಆಪರೇಟರ್ ಮಾತ್ರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎಲ್ಲಾ ಕೆಲಸ ಮಾಡುತ್ತಿದ್ದೆ. ಆ ದಿನ ನಾನು ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುತ್ತಿದ್ದೆ. ನಮ್ಮ ಎಲ್ಲಾ ಸಿಬ್ಬಂದಿಗಳು ಯಾರು ಎಲ್ಲಿಗೆ ಕರ್ತವ್ಯದ ಮೇಲೆ ಹೋಗಿದ್ದರು ಎಂದು ಗೊತ್ತಿಲ್ಲ. ನಮ್ಮ ಅಧಿಕಾರಿಗಳಿಗೆ ಎಷ್ಟು ಗಂಟೆಗೆ ಮಾಹಿತಿ ಬಂತು ಎಂದು ಗೊತ್ತಿಲ್ಲ. ಆದರೆ ನನಗೆ 11.15 ಗಂಟೆಗೆ ಮಾಹಿತಿ ಬಂದಿತ್ತು. ಉಳಿದ ಸಿಬ್ಬಂದಿಗಳಿಗೆ ಎಷ್ಟು ಗಂಟೆಗೆ ಮಾಹಿತಿ ಬಂದಿತ್ತು ಎಂದು ಗೊತ್ತಿಲ್ಲ. ನಾವು ಸ್ಟೇಷನ್‌ನ್ನು 11.15 ಕ್ಕೆ ಬಿಟ್ಟಿದ್ದೆವು. ನಾವು ಕೂಲಿನಗರ ಬ್ರಿಡ್ಜ್‌ಗೆ 11.30 ಗಂಟೆಗೆ ತಲುಪಿದೆವು. ಪಂಚರನ್ನು ನಮ್ಮ ಸಾಹೇಬರೇ ಕರೆದುಕೊಂಡು ಬಂದಿದ್ದರು. ಮಹಜರ್ ಸ್ಥಳದಲ್ಲಿ 12.30 ಯಿಂದ 3.30 ವರೆಗೆ ಇದ್ದೆವು. ಸದರಿ ವಾಹನಗಳ ಚಾಲಕರನ್ನು ಗುರುತಿಸಲು ಆಗುವುದಿಲ್ಲ, ಏಕೆಂದರೆ ಸುಮಾರು 15 ವರ್ಷಗಳ ಹಿಂದೆ ಘಟನೆ ಆಗಿತ್ತು. ನಾನು ವೈಯಕ್ತಿಕವಾಗಿ ಸದರಿ ಓಡಿ ಹೋದರು ಎಂದು ಹೇಳಲಾದ ವ್ಯಕ್ತಿ ಬಗ್ಗೆ ಗೊತ್ತಿಲ್ಲ. ನಮಗೆ ನಮ್ಮ ಹಿರಿಯ ಅಧಿಕಾರಿಗಳು ಮೊದಲೇ ವಿಷಯವನ್ನು ತಿಳಿಸಿದ್ದರು. ಮಹಜರ್ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ನಾನು ಸ್ಥಳಕ್ಕೆ ಹೋಗಿಲ್ಲ, ಮತ್ತು ಮಹಜರ್ ಮಾಡುವ ಸಮಯದಲ್ಲಿ ಹಾಜರಿರಲಿಲ್ಲ, ನಮ್ಮ ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು